Nature Classrooms

# ಬೈನೆ (ಬಗನಿ) ಮರ

ನಿಮಗೆ ಗೊತ್ತಾ? ಬೈನೆ ಮರದ ಇಂಗ್ಲಿಷ್ ಹೆಸರು 'ಫಿಶ್- ಟೈಲ್ ಪಾಮ್' (ಕ್ಯಾರಿಯೋಟಾ ಯುರೆನ್ಸ್ ) ಈ ಮರದ ಎಲೆಯ ತುದಿ ಮೀನಿನ ಬಾಲದಂತೆ ಕಾಣುವ ಕಾರಣದಿಂದ ಬಂದಿದೆ. "ಯುರೆನ್ಸ್ " ಎಂದರೆ ಉರಿಯುವುದು ಎಂದರ್ಥ. ಏಕೆಂದರೆ ಈ ಮರದ ಹಣ್ಣುಗಳ ಒಳಗೆ ಇರುವ ಚಿಕ್ಕ ಹರಳುಗಳು ಚರ್ಮಕ್ಕೆ ತೊಂದರೆ ಉಂಟುಮಾಡಬಹುದು. ಈ ಮರವು ಬಹಳ ಎತ್ತರವಾಗಿ, 20 ಮೀಟರ್ ವರೆಗೂ ಬೆಳೆಯುತ್ತದೆ. ಇದರ ಕಾಂಡವು ತೆಳುವಾಗಿ, ಉಂಗುರಗಳನ್ನು ಹೊಂದಿರುತ್ತದೆ!

ಬೈನೆ ಮರವು ಬಾವಲಿಗಳು, ಕಬ್ಬೆಕ್ಕುಗಳು, ಮಂಗಗಳು, ಚಿಟ್ಟೆಗಳು, ಪಕ್ಷಿಗಳು, ಕೀಟಗಳು, ಹಾಗೂ ಆರ್ಕಿಡ್ ಮತ್ತು ಜರೀಗಿಡಗಳಂತಹ ಪರಾವಲಂಬಿಯಲ್ಲದ, ಆದರೆ ಮತ್ತೊಂದು ಸಸ್ಯದ ಮೇಲೆ ಬೆಳೆಯುವ ಸಸ್ಯಗಳನ್ನು (ಎಪಿಫೈಟ್) ಸೇರಿ ಹಲವಾರು ಜೀವ ವೈವಿಧ್ಯಗಳಿಗೆ ಮನೆಯಾಗಿದೆ.

**ಮಂಗಟ್ಟೆಗಳು**
ಈ ಅತ್ಯಾಕರ್ಷಕ ಪಕ್ಷಿಗಳು ತಮ್ಮ ದೊಡ್ಡದಾದ ಕೊಕ್ಕಿನಿಂದ ಬೈನೆ ಮರದ ರಸಭರಿತ ಹಣ್ಣುಗಳನ್ನು ತಿನ್ನಲು ಬಹಳ ಇಷ್ಟ ಪಡುತ್ತವೆ. ಅಷ್ಟೇ ಅಲ್ಲ ಕಬ್ಬೆಕ್ಕುಗಳು ಸೇರಿದಂತೆ ಉಳಿದ ಪ್ರಾಣಿಗಳ ಹಾಗೆಯೇ ಈ ಹಣ್ಣಿನ ಬೀಜಗಳನ್ನು ಹೊಸ ಹೊಸ ಪ್ರದೇಶಗಳಿಗೆ ಕೊಂಡೊಯ್ದು ಬೀಜ ಪ್ರಸರಿಸಲು ಸಹಾಯ ಮಾಡುತ್ತವೆ!




**ಎಪಿಫೈಟ್ಗಳು**
ಎಪಿಫೈಟ್ ಸಸ್ಯಗಳು ಬೇರೆ ಆತಿಥೇಯ ಸಸ್ಯಗಳ ಮೇಲೆ ಬೆಳೆಯುವ ಸಸ್ಯಗಳಾಗಿವೆ. ಇವು ಆತಿಥೇಯ ಸಸ್ಯಗಳನ್ನು ಬೆಳೆಯಲು ಬೆಂಬಲಕ್ಕಾಗಿ ಬಳಸುತ್ತವೆ, ಆದರೆ ಅವುಗಳಿಂದ ಯಾವುದೇ ಆಹಾರವನ್ನು ಅಥವಾ ಪೋಷಕಾಂಶಗಳನ್ನು ತೆಗೆದುಕೊಳ್ಳುವುದಿಲ್ಲ. ನಿಮಗೆ ಇಲ್ಲಿ ಎಪಿಫೈಟ್ ಕಾಣಿಸುತ್ತಿದೆಯೇ?















ಒಂದು ಪ್ರತ್ಯೇಕ ಮರದ ಜೀವನಾವಧಿಯಲ್ಲಿ ಇದು ಒಂದು ಬರಿ ಮಾತ್ರ ಹೂವನ್ನು ಬಿಡುತ್ತದೆ! ಈ ಹೂವುಗಳು ಪುಟ್ಟದಾಗಿ ಬಿಳಿ ಹಾಗೂ ಹಳದಿ ಬಣ್ಣದಲ್ಲಿದ್ದು ಗುಚ್ಛವಾಗಿ ಬಿಡುತ್ತವೆ, ನಂತರ ಅದೇ ಗುಚ್ಛದಲ್ಲಿ ಅವು ಕಡು ಕೆಂಪಾದ ಹಣ್ಣುಗಳಾಗುತ್ತವೆ.

**ಇಂಡಿಯನ್ ಪಾಮ್ ಬಾಬ್**
ಈ ಪುಟ್ಟ ಚಿಟ್ಟೆಗಳು ಬೈನೆ ಮರದಲ್ಲಿ ತಮ್ಮ ಮೊಟ್ಟೆಯನ್ನು ಇಡುತ್ತವೆ. ಮೊಟ್ಟೆ ಒಡೆದು, ಹೊರಬರುವ ಕಂಬಳಿಹುಳುಗಳು ಬೈನೆ ಎಲೆಗಳನ್ನು ತಿಂದು ಬದುಕುತ್ತವೆ. ಈ ಚಿಟ್ಟೆಗೆ ಪಾಮ್ ಬಾಬ್ ಎಂದು ಹೆಸರು ಬರಲು ಕಾರಣ, ಈ ಕಂಬಳಿ ಹುಳುಗಳು ಹಲವಾರು ವಿಧದ ತಾಳೆ ಮರಗಳ ಮೇಲೆಯೇ ಬದುಕುವುದಕ್ಕಾಗಿ.

**ಭಾರತೀಯ ಸಂಸ್ಕೃತಿಯ ಭಾಗವಾಗಿ**
ಬೈನೆ ಮರದ ಧೃಡವಾದ ಕಾಂಡವನ್ನು ಸಾಂಪ್ರದಾಯಿಕವಾಗಿ ಗದ್ದೆಯಲ್ಲಿ ನೆಲವನ್ನು ಸಮತಟ್ಟು ಮಾಡಲು ಬಳಸುವ ಕೊರಡನ್ನು ತಯಾರಿಸಲು ಬಳಸುತ್ತಿದ್ದರು. ಅಷ್ಟೇ ಅಲ್ಲ, ಇದರ ದೊಡ್ಡದಾದ ಎಲೆಗಳನ್ನು ಮದುವೆ ಅಥವಾ ಬೇರೆ ಯಾವುದೇ ಸಂಭ್ರಮಾಚರಣೆಗಳಲ್ಲಿ ಚಪ್ಪರವನ್ನು ಹಾಕಲು ಬಳಸುತ್ತಿದ್ದರು.

**ಹಣ್ಣಿನ ಬಾವಲಿಗಳು**
ಈ ನಿಶಾಚರಿ ಅತಿಥಿಗಳು ತಮ್ಮ ಚೂಪಾದ ಹಲ್ಲುಗಳನ್ನು ಬಳಸಿ ಹಣ್ಣುಗಳ ಗುಚ್ಛವನ್ನು ಕತ್ತರಿಸಿ ಸವಿರುಚಿಯನ್ನು ಸೇವಿಸುತ್ತವೆ. ಇವುಗಳಲ್ಲಿ ಕೆಲ ಜಾತಿಗಳಾದ ಗಿಡ್ಡ ಮೂಗಿನ ಹಣ್ಣಿನ ಬಾವಲಿಗಳು ಬೈನೆ ಎಲೆಗಳ ಮಧ್ಯೆ ತಾತ್ಕಾಲಿಕವಾಗಿ ಆಶ್ರಯವನ್ನು ಕೂಡ ನಿರ್ಮಿಸಿಕೊಳ್ಳುತ್ತವೆ!

ಚಿತ್ರ ಹಾಗೂ ವಿನ್ಯಾಸ ರಚನೆ: ಅನನ್ಯಾ ಆರ್.
ಕನ್ನಡ ಅನುವಾದ: ಅದಿತಿ ರಾವ್

This work is licensed to Nature Classrooms under CC BY-SA 4.0

# ಚಟುವಟಿಕೆಗಳು

**ಒಂದು ಸಣ್ಣ ಕಥೆ ಬರೆಯಿರಿ**: ನೀವು ಬೈನೆ ಮರದ ಮೇಲೆ ಜೀವಿಸುತ್ತಿರುವ ಯಾವುದೋ ಒಂದು ಪ್ರಾಣಿಯೋ, ಪಕ್ಷಿಯೋ, ಅಥವಾ ಕೀಟವೋ ಎಂದು ಯೋಚಿಸಿ. ಈ ಮರದ ಮೇಲೆ ನೀವು ಅನುಭವಿಸಬಹುದಾದ ಸಾಹಸಗಳ ಬಗ್ಗೆ ಒಂದು ಕಥೆಯನ್ನು ಬರೆಯಿರಿ

**ಪ್ರಕೃತಿ ಪತ್ತೇದಾರಿಯಾಗಿರಿ:** ನಿಮ್ಮ ಮನೆ, ಶಾಲೆ, ಹತ್ತಿರದ ಉದ್ಯಾನ ಅಥವಾ ಸುತ್ತ-ಮುತ್ತಲಿನಲ್ಲಿ ಎಲ್ಲಾದರೂ ಇರುವ ಒಂದು ಬೈನೆ ಮರವನ್ನು ಹುಡುಕಿ. ಅದರ ಎಲೆ ಹಾಗು ಕಾಂಡವನ್ನು ಹತ್ತಿರದಿಂದ ಸೂಕ್ಷ್ಮವಾಗಿ ಗಮನಿಸಿ! ನಿಮಗೆ ಪ್ರಾಣಿಗಳ ಹಿಕ್ಕೆಗಳು, ಪುಕ್ಕಗಳು, ಅಥವಾ ತಿಂದು ಬಿಟ್ಟಿರುವ ಹಣ್ಣುಗಳು ಕಾಣುತ್ತಿವೆಯೇ? ಅವುಗಳನ್ನು ಚುಚ್ಚಿ ಬಿಡಲಾಗಿದೆಯೇ, ಅರ್ಧ ತಿನ್ನಲಾಗಿದೆಯೇ, ಅಥವಾ ಹಾಗೆಯೇ ನೆಲಕ್ಕೆ ಬಿದ್ದಿವೆಯೇ? ಇದನ್ನು ಯಾರು ಮಾಡಿರಬಹುದು? ನಿಮಗೆ ಕಾಣಿಸುತ್ತಿರುವುದನ್ನು ಚಿತ್ರಿಸಿ, ಫೋಟೋ ತೆಗೆದುಕೊಳ್ಳಿ, ಹಾಗು ಅದರ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ.

ಜಗಿದು ಬಿಟ್ಟ ಮೊನಚಾದ ತುದಿಯ ಎಲೆಗಳು ಮಂಗಗಳ ಮಧ್ಯಾಹ್ನದ ಊಟವಾಗಿರಬಹುದು, ಅಥವಾ ಎಳೆಯ ಮೇಲಿನ ಚಿಕ್ಕದಾದ ಗುರುತುಗಳು ಕೀಟಗಳು ಎಲೆಗಳನ್ನು ಅಥವಾ ಮರದ ಇತರೆ ಭಾಗಗಳನ್ನು ಬಳಸುತ್ತಿವೆ ಎಂದು ಹೇಳಬಲ್ಲವು. ಮರದ ಬುಡದಲ್ಲಿ ಹಿಕ್ಕೆಗಳು ಕಂಡರೆ, ಅವು ಯಾವುದಾದರೂ ನಿಶಾಚರಿ ಜೀವಿಗಳ ಇರುವಿಕೆಯನ್ನು ತಿಳಿಸಬಲ್ಲವು. ಹೀಗೆಯೇ ಹಲವಾರು ಕುರುಹುಗಳನ್ನು ಗಮನಿಸಿ, ಅವನ್ನು ಹೋಲಿಸಿ, ಯಾವ ಯಾವ ಜೀವಿಗಳು ಅಲ್ಲಿ ಇರಬಲ್ಲವು ಎಂದು ಹುಡುಕುವುದರ ಮೂಲಕ ನಾವು ಕೂಡ ಪತ್ತೇದಾರರಾಗಬಹುದು.

ನಿಮ್ಮ ಸಮುದಾಯದಲ್ಲಿನ ಹಿರಿಯರನ್ನು ಕೇಳಿ ಹಾಗೂ ಗಿಡ-ಮರಗಳ ಬಗ್ಗೆ ಇರುವ ಯಾವುದೇ ಕಥೆಗಳು, ಹಾಡುಗಳು, ಅಥವಾ ಸಂಪ್ರದಾಯಗಳನ್ನು ತಿಳಿದುಕೊಳ್ಳಿ. ಅವನ್ನು ಸಂಗ್ರಹಿಸಿ ಹಾಗೂ ನಿಮ್ಮ ಮಿತ್ರರೊಂದಿಗೆ ಹಾಗೂ ತರಗತಿಯಲ್ಲಿ ಹಂಚಿಕೊಳ್ಳಿ.

Nature Classrooms

ಚಿತ್ರ ಹಾಗೂ ವಿನ್ಯಾಸ ರಚನೆ: ಅನನ್ಯಾ ಆರ್.
ಕನ್ನಡ ಅನುವಾದ: ಅದಿತಿ ರಾವ್
This work is licensed to Nature Classrooms under CC BY-SA 4.0